ಅನುಗ್ರಹವೂ ಆಗಿತ್ತಲ್ಲ! ಆಯಿತೆಂದೆ; ಇಬ್ಬರಿಗೂ ಮುಂದೆ ಮಾತು ಹೊರಡಲಿಲ್ಲ.

ಶಂತನು ಮಹಾರಾಜನಾಗಿಯೂ, ಗಂಡಸಾಗಿಯೂ ಹೆಣ್ಣಿನಂತೆ ಕಣ್ಣೀರು ಮಿಡಿಯುತ್ತಿದ್ದ. ನಾನೂ ಯಾಕೋ ಏನೋ ಕಣ್ಣೀರಾಗಿದ್ದೆ. ಇಷ್ಟುದಿನ ನಾನು ಪ್ರೇಮಿಸಿದ ಶಂತನುವಿನೊಂದಿಗೆ ಸಂಸಾರ ಮಾಡಿದ್ದೆ. ತುಂಬ ಪ್ರೇಮಳವಾದ ದಾಂಪತ್ಯ! ಅಗಲುವಿಕೆಯ ವ್ಯಾಕುಲತೆ ನನ್ನನ್ನೂ ಕಾಡಿತು. ಭೂಲೋಕದ ನಡೆ–ನುಡಿ, ಪ್ರೇಮ–ಮೋಹ ನನ್ನನ್ನೂ ಆವರಿಸಿಕೊಂಡು ಬಿಟ್ಟಿತ್ತೋ ಏನೋ! ಇಬ್ಬರೂ ಮೌನಕ್ಕೆ ಜಾರಿದ್ದೆವು. ಗಾಢ ಮೌನ; ಅಗಲುವಿಕೆಯ ಹೇಳಲಾಗದ ಯಾವುದೋ ವ್ಯಥೆ–ವಿವಶತೆ.

ನನ್ನ ಮನಸ್ಸು ದ್ವಂದ್ವಕಡಲಲ್ಲಿ ಮುಳುಗೇಳುತ್ತಲೇ ಇತ್ತು. ಆದರೆ ನಾನು ಹೊರಡಲೇಬೇಕಿತ್ತು. ಪ್ರೇಮಾನುಬಂಧವನ್ನು ಕಡಿದುಕೊಂಡು, ದೇವಲೋಕಕ್ಕೆ ಮರಳಲೇಬೇಕಾಗಿತ್ತು. ಅದು ಶಾಪದ 'ಪ್ರವರ್ತನದಲ್ಲಿ' ಅನಿವಾರ್ಯ ಜರುಗಲೇ ಬೇಕಾದ 'ವರ್ತನವೂ' ಆಗಿತ್ತು. ನಾನು ಶಂತನು ಬಳಿಸಾರಿ, ನೀಳವಾದ ತೋಳುಗಳಿಂದ ಬಳಸಿ ನನ್ನೆಲ್ಲ ಪ್ರೇಮವನ್ನೂ ಅಲ್ಲಿ ಚೆಲ್ಲಿದೆನೋ ಎಂಬಂತೆ ಮನಸಾ ಚುಂಬಿಸಿದೆ. ಬಳಿಕ ಆಲಿಂಗನದಿಂದ ಹೊರಬಂದು ಹೇಳಿದೆ: 'ಶಂತನು, ಇನ್ನು ನಾನು ದೇವಲೋಕಕ್ಕೆ ಹೊರಡುವ ಸಮಯ ಆಗಿಹೋಯಿತು. ನಾನು ನಿನ್ನನ್ನು ಅಗಲುವ ತೊರೆಯುವ ಕಾಲವೂ ಬಂತು. ಇದು ನನ್ನ ಷರತ್ತು; ನೀನು ಇತ್ತ ವಚನ. ಪುತ್ರನನ್ನು ದೇವವ್ರತನೆಂದು ನಾಮಕರಣಮಾಡಿ, ಪೋಷಿಸಿ–ಬೆಳೆಸಿ, ಪರಶುರಾಮರಲ್ಲಿ ಶಿಕ್ಷಣ ಕೊಡಿಸಿ ಕರೆತಂದು ಒಪ್ಪಿಸುವೆ'.

'ಗಂಗಾ, ನನ್ನ ಹೃದಯಮಂದಿರದ ದೇವಿ, ನೀನು ಇಲ್ಲಿಯೇ ನನ್ನೊಂದಿಗೆ ಮಹಾರಾಣಿಯಾಗಿ, ಮಗುವಿನ ತಾಯಿಯಾಗಿ ಉಳಿಯಲಾಗದೆ?'

ದೈನ್ಯದಿಂದ ಬೇಡಿಕೊಂಡ. ನಾನೆಂದೆ: 'ಷರತ್ತಿನ ಪ್ರಕಾರ ವಂಚನಭಂಗ ಆಯಿತು, ನನ್ನ ಭೂಲೋಕವಾಸದ ಅವಧಿಯೂ ಮುಕ್ತಾಯವಾಯಿತು. ನನ್ನ ಸಹಿತ ಎಲ್ಲರೂ ನಿಯತಿಗೆ ಬದ್ಧರು. ಅದರ ಇಚ್ಛೆಯಂತೆ ಎಲ್ಲವೂ ಜರುಗುತ್ತದೆ. ದುಃಖಿಸುವುದರಲ್ಲಿ ಅರ್ಥವಿಲ್ಲ'.

'ಸುಂದರ ತರುಣಿಯೋರ್ವಳನ್ನು ವಿವಾಹವಾಗಿ ಮುಂದಿನ ಜೀವನ ಸಾಗಿಸು' ಎಂದು ವಿದಾಯ ಹೇಳಿ, ಮರುದಿನವೇ ಮಾನವ ಜನುಮ ಕಳೆದು ದೇವಲೋಕಕ್ಕೆ ಹಿಂದಿರುಗಿದೆ. ಆಮೇಲೆ ಪ್ರಾಯಪ್ರಬುದ್ಧನಾದ ದೇವವ್ರತನನ್ನು ಶಂತನುವಿಗೆ ಒಪ್ಪಿಸಿಯೂ ಬಂದೆ. ಅವನೇ ಮುಂದೆ ಗಂಗಾತರಳ, ಗಾಂಗೇಯ ಎನ್ನಿಸಿಕೊಂಡ; ಯೋಜನಗಂಧಿಯನ್ನು ತಂದೆಗೆ ಮದುವೆ ಮಾಡಿಸಿ, ಹಸ್ತಿನೆಯ ಸಿಂಹಾಸನವೇರೆನೆಂದು ಮಹಾಪ್ರತಿಜ್ಞೆ ಮಾಡಿ 'ಭೀಷ್ಮ'ನೆನಿಸಿದ. ನನ್ನ ಮಗನ ಬಗ್ಗೆ ನನಗೆ ಹೆಮ್ಮೆಯಿದೆ.

ವೈಶಾಖ ಶುದ್ಧ ಸಪ್ತಮಿ ನಾನು ಹುಟ್ಟಿದ ದಿನ. ಗಂಗಾಮತಸ್ಥರಾದಿಯಾಗಿ, ಸಮಸ್ತ ಲೋಕದ ಜನರಿಗೆ ನಾನು ಜನನಿ. ಜೀವದಾಯಿನಿಯಾದ ಗಂಗಾಮಾಯಿ. ಸರ್ವಜನ ಸರ್ವ ಹಿತ–ಸಂತೋಷ, ಲೋಕಕಲ್ಯಾಣವೇ ನನ್ನ ಗುರಿ... ನಾನು ನಿರಂತರ ಹರಿಯುತ್ತಲೇ ಇದ್ದೇನೆ. 'ಗಂಗಾಸ್ನಾನ ತುಂಗಾಪಾನ' ಎಂದು ಲೋಕದಲ್ಲಿ ಭಕ್ತಜನ ನಂಬಿ ನಡೆದುಕೊಳ್ಳುತ್ತಲೇ ಬಂದಿದ್ದಾರೆ... ಯುಗ ಯುಗಗಳಿಂದ... ಯುಗ ಯುಗಾಂತರಗಳಿಂದ...

ಪ್ರತಿಕ್ರಿಯಿಸಿ: feedback@sudha.co.in



# ಚುಟು ಚುಟು ಅಂತೈತಿ..

**ಚಲನಚಿತ್ರ** ಹಿನ್ನೆಲೆ ಗಾಯಕರು ಕಾರ್ಯಕ್ರಮಗಳಿಗೆ ಹೋಗುವುದು, ಹಾಡುವುದು ಸಾಮಾನ್ಯ. ತಮ್ಮದೇ ಆದ ತಂಡದಲ್ಲಿ ಲೈವ್ ಕಾನ್ಸರ್ಟ್ ನೀಡುವುದೇ ಇರಬಹುದು, ಬೇರೆಯವರ ತಂಡದಲ್ಲಿ ಅತಿಥಿ ಗಾಯಕರಾಗಿ ಹೋಗೋದೇ ಇರಬಹುದು... ಹೀಗೆ ಸಿಮ್ ಇವೆಂಟ್ಸ್ ಕಾರ್ಯಕ್ರಮದಲ್ಲಿ ನನ್ನ ಶಮ ತಂಡದ ಸಂಗೀತ ಕಾರ್ಯಕ್ರಮ ನೀಡಲು ಉತ್ತರ ಕರ್ನಾಟಕದ ಒಂದು ಊರಿಗೆ ಹೋಗಿದ್ದೆ. ಕಾರ್ಯಕ್ರಮ ಶುರುವಾಗಿ ನನ್ನ ತಂಡದ ಗಾಯಕರು ಒಂದೆರಡು ಹಾಡುಗಳನ್ನು ಹಾಡಿದ ನಂತರ ನಾನು ನೃತ್ಯ ತಂಡದ ಜೊತೆಯಲ್ಲಿ ಮಧುರ ಪಿಸುಮಾತಿಗೆ ಹಾಡಿನೊಂದಿಗೆ ಹಾಡಲು ಮಾಡಿದೆ. ಅದಾದ ನಂತರ ಕೆಲವು ಜನಪದ ಗೀತೆಗಳು, ಹಳೆಯ ಚಲನಚಿತ್ರ ಗೀತೆಗಳು, ಯುಗಳಗೀತೆಗಳು, ಹಾಡಿದ ನಂತರ ಒಬ್ಬರು ಹಿರಿಯ ವ್ಯಕ್ತಿ ಒಬ್ಬರು ಸ್ಟೇಜ್ ಮೇಲೆ ಬಂದರು.

ನೇರವಾಗಿ ನನ್ನ ಹತ್ತಿರ ಬಂದು 'ಈ ಸಂಗೀತ ತಂಡದ ನಾಯಕ್ರು ನೀವೇನ್ರಿ' ಎಂದು ಕೇಳಿದರು. 'ಹೌದು ಏನಾಗಬೇಕಾಗಿತ್ತು' ಎಂದು ನಾನು ಕೇಳಿದೆ. 'ಅಲ್ರಿ ಯವ್ವ... ಅರ್ಧ ಗಂಟೆಯಿಂದ ಬೇರೆ ಬೇರೆ ಹಾಡುಗಳು ಹಾಡ್ತಾನೆ ಇದಿರಿ. ನಮ್ಮ ಉತ್ತರ ಕರ್ನಾಟಕ ಜವಾರಿ ಹಾಡು ಅಷ್ಟು ಫೇಮಸ್ ಆಗೇತಿ, 'ಚುಟು ಚುಟು ಅಂತೈತಿ...' ಹಾಡು, ಭೋಲೋ ಐತ್ರಿ. ಆ ಹಾಡ್ನ ಹಾಡಕ್ಕೆ ಹೇಳ್ರಿ ನಿಮ್ ಗಾಯಕ್ರಿಗೆ! ಅಂದ್ರು. ಅದಕ್ಕೆ ನನ್ನ ಜೊತೆಗಿದ್ದಂತಹ ಗಾಯಕರು 'ಹಾಡತಾರೆ ತಾತ... ಆ ಹಾಡನ್ನು ಇವರೇ ಹಾಡಿರೋದು' ಎಂದು ಹೇಳಿದರು. ಆಗ ಆ ತಾತ ನನ್ನೊಮ್ಮೆ ನೋಡಿ 'ಓಹ್, ಇವರೇ ಏನ್ರಿ, ನಂಗ ಗೊತ್ತಾಗಿಲ್ರಿ, ಇವಾಗ ಅದ್ನ ಹಾಡಾಕ ಆಗತ್ತೇನ್ರಿ?' ಎಂದು ಕೇಳಿದರು.

ಆಗ ನಾನು ಹೇಳಿದೆ 'ಇಲ್ಲ ತಾತ ಈ ಹಾಡನ್ನು ನಾನೇ ಹಾಡಿರೋದು, ಸ್ವಲ್ಪ ಹೊತ್ತಿನ ನಂತರ ನಾವು ಹಾಡ್ತೀವಿ' ಅಂತ. ಆಗ ಅವರು, 'ಅಂದ್ರ ಶಮಿತಾ ಮಲ್ನಾಡ್ ನೀವೇ ಏನ್ರಿ?' ಎಂದು ಸಂಶಯದಿಂದ ನೋಡಿದ್ರು. 'ಹೌದು ತಾತ, ನಾನೇ ಹಾಡಿರೋದು ಅದನ್ನ ಈಗ ಹಾಡ್ತೀನಿ' ಎಂದು ಆಶೀರ್ವಾದ ಪಡೆದೆ. ಆಗ ಖುಷಿಯಿಂದ 'ಬಾಳ್ ಭೋಲೋ ಹಾಡಿರಿ ಮತ್ತ ನೀವು, ಬಾಳ್ ಭೋಲೊ ಹಾಡಿರಿ. ದಿನಕ್ ಹತ್ಸಲ ಕೇಳ್ತೀನಿ ನೋಡ್ರಿ ಮತ್ತ... ನೀವು ಬೆಂಗಳೂರು ಪಟ್ಟಣದವರ ತರ ಕಾಣಿಸಿದ್ರಿ.. ಹೆಂಗ್ ಗೊತ್ತಾಗ್ಬೈತ್ರಿ?' ಎಂದು ಖುಷಿಯಿಂದ ಹೇಳಿದ್ರು.. ನಂತರ ಆ ಹಾಡನ್ನು ಹಾಡಿದಾಗ ಎಲ್ಲ ಜನರ ಜೊತೆ ಆ ತಾತ ಕೂಡ ಕೈಕಾಲು ಅಲ್ಲಾಡಿಸುತ್ತಾ ಡಾನ್ಸ್ ಮಾಡಿದ್ದು ಎಂದಿಗೂ ಮರೆಯೋಕಾಗಲ್ಲ.

ಇಂತಹ ಹಲವಾರು ಪ್ರಸಂಗಗಳು ನಮ್ಮ ಕಾರ್ಯಕ್ರಮದಲ್ಲಿ ರೆಕಾರ್ಡಿಂಗ್‌ನಲ್ಲಿ ನಡೀತಾನೆ ಇರುತ್ತೆ ಆದರೆ ಈ ಒಂದು ಪ್ರಕರಣ ಸದಾಕಾಲ ನನಗೆ ಖುಷಿ, ನಗು ಎರಡನ್ನು ತರುತ್ತದೆ.

### ತಮಾಷೆಯಾಗಿ ಹಾಡಿದ್ದು!

**ಚಿತ್ರಸಂಗೀತ** ನಿರ್ದೇಶಕ ಗುರುಕಿರಣ್ ಅವರ ಒಂದು ರೆಕಾರ್ಡಿಂಗ್‌ಗೆ ನನಗೆ ಕರೆ ಬಂತು. ಆಗ ಅಶ್ವಿನಿ ರೆಕಾರ್ಡಿಂಗ್ ಸ್ಟುಡಿಯೊದಲ್ಲಿ ಹಾಡಿನ ಧ್ವನಿಮುದ್ರಣ ನಡೆಯುತ್ತಿತ್ತು. ಗೋಲ್ಡನ್ ಸ್ಟಾರ್ ಗಣೇಶ್ ಅವರ ಪ್ರಥಮ ಚಿತ್ರಕ್ಕೆ ಒಂದು ಡ್ಯುಯೆಟ್ ಹಾಡಬೇಕಿತ್ತು. ಗುರುಕಿರಣ್ ಹಾಡನ್ನು ಕೊಟ್ಟಾಗ ನಾನು ಹಾಡ್ತಾ ಇದ್ದೆ. ಅಷ್ಟರಲ್ಲಿ ಗಣೇಶ್ ಅಲ್ಲಿಗೆ ಬಂದ್ರು. ಬಹಳಷ್ಟು ಸಾರಿ ಟೇಕ್ ಆದ್ರೂ ಗುರುಕಿರಣ್ ಅವರಿಗೆ ನಾನು ಹಾಡುವ ಸ್ಟೈಲ್ ಇಷ್ಟ ಆಗ್ತಾ ಇರ್ಲಿಲ್ಲ. ಬೇರೆ ರೀತಿ ಹಾಡು, ಬೇರೆ ಟ್ರೈ ಮಾಡು..., ಅಂತ ಹೇಳ್ತಾನೆ ಇದ್ರು.

ಆಗ ಒಮ್ಮೆ ನನಗೆ ಅನಿಸ್ತು ಇದು ಸ್ವಲ್ಪ ಕಾಮಿಡಿ ಹಾಡು ಆಗಿದ್ರಿಂದ ಸ್ವಲ್ಪ ತರಲೇ ಸ್ವರದಲ್ಲಿ ಹಾಡೋಣ ಅಂತ. ಆ ಹಾಡಿನ ಮೊದಲನೇ ಸಾಲನ್ನು ತಮಾಷೆಯಾಗಿ, ನನ್ನದೇ ಶೈಲಿಯಲ್ಲಿ ಹಾಡಿದೆ. ತಕ್ಷಣ ಗುರುಕಿರಣ್ ಅವರಿಗೆ ಆ ಸ್ಟೈಲ್ ಇಷ್ಟ ಆಯ್ತು. ಹಾ.. ಹಾ... ಇದೇ ಇದೇ! ತರಹ ಇಡೀ ಹಾಡನ್ನು ಹಾಡು. ಮತ್ತೆ ಸ್ಟೈಲ್ ಮರಿಬೇಡ ಅಂದ್ರು.

ಅಂದ್ರೆ ನಿಮ್ ಪ್ರಕಾರ ವಾಯ್ಸ್ ಕೆಟ್ಟದಾಗಿ ಮಾಡಿಕೊಂಡು ಹಾಡ್ಬೇಕು ಅಲ್ವಾ? ಅಂತ ನಾನು ನಕ್ಕೆ. ಹೌದು, ಇದು ಹಾಗೇನೇ.. ಕೆಟ್ಟದಾಗೆ ನೀನು ಹಾಡಬೇಕು... ಅಂದಾಗ ಎಲ್ಲರೂ ನಕ್ರು. ಹಾಗೆ ಹಾಡಿದ ಹಾಡಿ ಸೂಪರ್ ಹಿಟ್ ಹಾಡಾದ ಚೆಲ್ಲಾಟ ಚಿತ್ರದ 'ಅಲೆಲೆ ತುಂಟು ಕಣ್ಣ ಸುಂದರಿ...!'

**–ಶಮಿತಾ ಮಲ್ನಾಡ್, ಚಲನಚಿತ್ರ ಹಿನ್ನೆಲೆ ಗಾಯಕಿ**